ಓ.ಎಸ್ ನಂ. 12/2018
ಡಿ.ಡಬ್ಲೂಃ 2

**ಇಂದು ದಿನಾಂಕ 18.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ**

ವಾದಿ ಮತ್ತು ಪ್ರತಿವಾದಿಯರು ನಮ್ಮ ಊರಿನವರು ಆದ ಕಾರಣ ಅವರ ಪರಿಚಯ ಇದೆ. ದಾವಾ ಸ್ವತ್ತುಗಳ ಸರ್ವೆ ನಂಬರ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಕೊಳುರಗಿ , ರೇಬಿನಾಳ , ಮಿಂಚನಾಳ , ಇಂಚಗೇರಿ ಗ್ರಾಮದಲ್ಲಿ ಇವೆ. ಅದೇ ರೀತಿ ಅವುಗಳ ಕ್ಷೇತ್ರ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯರ ಮನೆತನದ ಮೂಲಪುರುಷ ದ್ಯೆಗೌಂಡ ಎಂದು ಇದ್ದರು ಅಂದರೆ ಸರಿ . ಆ ಮೂಲ ಪುರುಷನ ಹೆಂಡತಿ ಬಾಗೀರಥಿ ಎಂದು ಇದ್ದಳು ಅಂದರೆ ಸರಿ. ಮೂಲ ಪುರುಷ ದ್ಯೆಗೌಂಡರವರು 1942 ರಲ್ಲಿ ಮೃತಪಟ್ಟಿದ್ದಾರೆ ಅಂದರೆ ಸರಿ. ಆಗ ಆತನಿಗೆ ಯಾವುದೇ ಸಂತಾನ ಇರಲಿಲ್ಲ ಅಂದರೆ ಸರಿ. ಮೂಲಪುರುಷ ದ್ಯೆಗೊಂಡ ಮತ್ತು ಆತನ ಹೆಂಡತಿ ಬಾಗೀರತಿಗೆ ಗಂಗಾಬಾಯಿ ಎನ್ನುವ ಒಬ್ಬ ಮಗಳು ಇದ್ದಳು ಅಂದರೆ ಸರಿ. ಮೂಲಪುರುಷ ಮೃತಪಟ್ಟ ನಂತರ ಆತನ ಆಸ್ತಿ ಆತನ ಹೆಂಡತಿಗೆ ಬಂತು ಅಂದರೆ ಸರಿಯಲ್ಲ.

ಮೂಲಪುರುಷನ ಹೆಂಡತಿ ಬಾಗೀರತಿರವರು ತನ್ನ ಗಂಡ ಮೃತಪಟ್ಟ ನಂತರ ತನಗೆ ಗಂಡು ಸಂತಾನ ಇಲ್ಲದ ಕಾರಣ ಈರಣ್ಣಗೌಡ ಎನ್ನುವವರ ಮಗ ಅಣ್ಣಾರಾಯರವರನ್ನು ದತ್ತಕ ಪಡೆದುಕೊಂಡರು ಅಂದರೆ ಸರಿ. ಆ ಅಣ್ಣಾರಾಯರವರು ಮದುವೆ ಆಗದೇ 1951 ರಲ್ಲಿ ಮೃತಪಟ್ಟರು ಅಂದರೆ ಸರಿ. ಆ ನಂತರ ಬಾಗೀರತಿರವರು 1951 ರಲ್ಲಿ ಬಾಬುಗೌಡರನ್ನು ದತ್ತಕ ಪಡೆದುಕೊಂಡಳು ಅಂದರೆ ಸರಿ . ಆ ಸಂದರ್ಭದಲ್ಲಿ ವಾದಿಯು ಸಹ ಇದ್ದರು ಅಂದರೆ ಸರಿ.

ವಾದಿಗೆ ಒಟ್ಟು 8 ಜನ ಮಕ್ಕಳು ಅಂದರೆ ಸರಿ.

( ವಾದಿಯ ಉಳಿದ ನೈಸರ್ಗಿಕ ವಾರಸುದಾರರನ್ನು ಈ ದಾವೆಯಲ್ಲ ಸೇರಿಸದೇ ಇಲ್ಲದ ಕಾರಣ ಮುಂದುವರಿದ ಪಾಟೀಸವಾಲಿಗಾಗಿ ಸಮಯ ಕೋರಿದ್ದರಿಂದ ಮುಂದೂಡಲಾಯಿತು)

(ತೆರೆದ ನ್ಯಾಯಾಲಯಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ

ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಂ.ಎಫ್.ಸಿ.
ಇಂಡಿ.